# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ77-ದತ್ತಾತ್ರೇಯ ದೇವಸ್ಥಾನ ವಾರ್ಡ್

## ದಿನಾಂಕ:05.06.2021 ರಂದು ನಡೆದ ಸಭೆಯ ನಡವಳಿಗಳು

ವಿಷಯ:- ವಾರ್ಡ್ ನಂ.77 ದತ್ತಾತ್ರೇಯ ದೇವಸ್ಥಾನ ವಾರ್ಡ್ ಸಮಿತಿ
ಸಭೆಯ ನಡುವಳಿ.

>>>***<<<

ದಿನಾಂಕ:05.06.2021 ರಂದು, ವಾರ್ಡ್ ಸಂಖ್ಯೆ:77, ದತ್ತಾತ್ರೇಯ ದೇವಸ್ಥಾನ ವಾರ್ಡ್‌ನಲ್ಲಿ ಬೆಳ್ಳಿಗೆ 12.00 ಗಂಟೆಗೆ ನಡೆದ ಸಭೆಯ ನಡುವಳಿಗಳು.

**ಸಭೆಗೆ ಹಾಜರಿದ್ದವರು**

1) ಶ್ರೀ.ಎಂ.ಆರ್.ಚಂದ್ರಶೇಖರ್, ನೋಡಲ್ ಅಧಿಕಾರಿ, ಉಪ ನಿರ್ದೇಶಕರು (ತೋಟಗಾರಿಕೆ)
2) ಎರಡು ವಲಯದ ಕಂದಾಯ ಅಧಿಕಾರಿಗಳು,
3) ವಾರ್ಡ್ ವಲಯದ ಆರೋಗ್ಯಾಧಿಕಾರಿಗಳು,
4) ಕೋವಿಡ್‌ಗೆ ಸಂಬಂಧ ಪಟ್ಟಂತೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂಧಿಗಳು,
5) ಸಂಬಧಪಟ್ಟ ಇತರೆ ಇಲಾಖೆ ಅಧಿಕಾರಿಗಳು ಹಾಜರಿರುವುದಿಲ್ಲ.

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಶ್ರೀ.ಎಂ.ಆರ್.ಚಂದ್ರಶೇಖರ್, ನೋಡಲ್ ಅಧಿಕಾರಿ, ಉಪ ನಿರ್ದೇಶಕರು (ತೋಟಗಾರಿಕೆ) ಹಾಗೂ ವಾರ್ಡ್ ಸಂಖ್ಯೆ 77 ನೋಡಲ್ ಅಧಿಕಾರಿ ರವರು ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ ಬಗ್ಗೆ ಮತ್ತು ಅದರ ಸೊಂಕು ಹರಡದಂತೆ ತೆಗೆದು ಕೊಂಡಿರುವ ಸಂಬಂಧದ ಬಗ್ಗೆ ಮತ್ತು ಮುಜಾಗ್ರಾತ ಕ್ರಮಗಳ ಬಗ್ಗೆ ಚರ್ಚಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ವಿಯಗಳ ಬಗ್ಗೆ ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳು ಹಾಜರಿಲ್ಲದೇ ಇರುವುದರಿಂದ ವಿಷಯವನ್ನು ಮುಂದೂಡಿದೆ.

ವಾರ್ಡ್ ಘನ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ ಚರ್ಚಿಸಿದರು. ಸಭೆಯಲ್ಲಿ ಯಾವುದೇ ದೂರುಗಳು ಬಂದಿರುವುದಿಲ್ಲ.

ವಿದ್ಯುತ್ ಸರಬರಾಜು ಮತ್ತು ಬೀದಿ ದೀಪಗಳ ನಿರ್ವಹಣೆ ಬಗ್ಗೆ ಸಂಬಂಧಿಸಿದಂತೆ ಹೊಸ ಗುತ್ತಿಗೆದಾರರಿಗೆ ವಹಿಸಿದ್ದು, ಸರಿಯಾಗಿ ಕೆಲಸ ನಿರ್ವಹಿಸಲು ಸದರಿ ರವರಿಗೆ ದೂರವಾಣಿ ಮುಖಾಂತರ

ಮಾತಾನಾಡಿ ಕೆಲಸ ನಿರ್ವಹಿಸಲು ಸೂಚಿಸಿದರು. ವಿದ್ಯುತ್ ಸರಬರಾಜುವಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆ ಇರುವುದಿಲ್ಲವೆಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ತ್ವರಿತ ಗತಿಯಲ್ಲಿ ತಮ್ಮಗೆ ಸೂಚಿಸಿರುವ ಕೆಲಸಗಳನ್ನು ನಿರ್ವಹಿಸುವಂತೆ ಕೋರಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ
ವಾರ್ಡ್

<u>ಪ್ರತಿಯನ್ನು:-</u>

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.